


# ಚೋರ್ ಬಜಾರ್

## ಕೊಳ್ಳುಬಾಕರ ಅಯಸ್ಕಾಂತ

**‘ಪೀಕೆ’ ಸಿನಿಮಾದಲ್ಲಿ ಅಮೀರ್‌ಖಾನ್ ಕೈಯಲ್ಲಿನ ಟ್ರಾನ್ಸಿಸ್ಟರ್ ಎಲ್ಲಿಂದ ಬಂದದ್ದು ಗೊತ್ತೆ? ಮುಂಬೈನ ‘ಚೋರ್ ಬಜಾರ್’ನಿಂದ. ಎಲ್ಲೂ ಸಿಗದ ಹಳೆಯ ವಸ್ತುಗಳಿಗೆ ಈ ಬಜಾರ್ ಪ್ರಸಿದ್ಧಿ. ಕದ್ದ ಮಾಲುಗಳಿಗೂ ಫೇಮಸ್!**

■ ಶ್ರೀನಿವಾಸ ಜೋಕಟ್ಟೆ

‘ನಿಮ್ಮ ಅಗತ್ಯದ ಹಳೆಯ ವಸ್ತುಗಳನ್ನು ಹುಡುಕುತ್ತಿದ್ದೀರಾ? ಹಳೆ ವಸ್ತುಗಳ ಬಿಡಿ ಭಾಗಗಳನ್ನು ಹುಡುಕುತ್ತಿದ್ದೀರಾ? ಹಾಗಾದರೆ ಇಲ್ಲಿಗೆ ಬನ್ನಿ. ಇಲ್ಲಿ ಸಿಗುವ ಅವಕಾಶಗಳು ಹೆಚ್ಚು. ಒಂದು ವೇಳೆ ಇಲ್ಲಿ ಸಿಗಲಿಲ್ಲ ಅಂದರೆ ಮತ್ತೆಲ್ಲೂ ಸಿಗುವುದಿಲ್ಲ...’

ಹೀಗೆ ಧೈರ್ಯದಿಂದ ಹೇಳುವವರನ್ನು ಕಾಣಬೇಕಾದರೆ ಮುಂಬೈ ಮಹಾನಗರದ ‘ಚೋರ್ ಬಜಾರ್’ಗೆ ನೀವು ಬರಬೇಕು.

ಮುಂಬೈ ಮಹಾನಗರದ ಪ್ರವಾಸಿ ತಾಣಗಳಲ್ಲಿ ಒಂದಾಗಿರುವ ಈ ‘ಚೋರ್ ಬಜಾರ್’ನ ಚಿತ್ರಣ ಆಸಕ್ತಿದಾಯಕವಾಗಿದೆ. ದಕ್ಷಿಣ ಮುಂಬೈನ ‘ಭೆಂಡಿ ಬಜಾರ್’, ‘ನಲ್ ಬಜಾರ್’, ‘ಮಟನ್ ಸ್ಟ್ರೀಟ್’ – ಇವೆಲ್ಲ ಪ್ರಸಿದ್ಧ ವ್ಯಾಪಾರಿ ಸ್ಥಳಗಳು. ಭೆಂಡಿ ಬಜಾರ್ ಬಳಿಯಲ್ಲಿರುವ ‘ಗೋಲ್ ದೇವಲ್’ (ರೌಂಡ್ ಟೆಂಪಲ್) ರಸ್ತೆ ಕಡೆ ಅಥವಾ ‘ದೋ ಟಾಕಿ’ಯ ಸಮೀಪದ ಗಲ್ಲಿಗಳಲ್ಲಿ ಭೆಂಡಿ ಬಜಾರ್ ಕಡೆ ನಡೆದಾಡುವಾಗ ವಿಶಿಷ್ಟ ಬಜಾರ್ ಕಾಣಸಿಗುವುದಿದೆ. ಇನ್ನೂ ವಿವರವಾಗಿ ಹೇಳಬೇಕೆಂದರೆ, ಎಸ್.ವಿ. ಪಟೇಲ್ ಮಾರ್ಗದಿಂದ ಮೌಲಾನಾ ಶೌಕತ್ ಅಲಿ ರಸ್ತೆಯವರೆಗೆ ಹರಡಿರುವ ಜಾಗವೇ ಈ ದೇಶದ ಅತ್ಯಂತ ಪ್ರಸಿದ್ಧ ಚೋರ್ ಬಜಾರ್.

### ಚೋರ್ ಬಜಾರ್ ಏಕಾಯ್ತು?

ಕಳ್ಳಸಾಗಾಣಿಕೆಯ ಮತ್ತು ಕದ್ದ ಸಾಮಗ್ರಿಗಳು ಇಲ್ಲಿ ಲಭ್ಯ ಎಂಬುದು ಜನರ ಬಾಯಿಂದ ಬಾಯಿಗೆ ಹರಡಿಯೇ ಈ ಹೆಸರು ಗಳಿಸಿಕೊಂಡಿದೆ. ಆದರೆ ನಿಜಕ್ಕೂ ಇಲ್ಲಿ ಕದ್ದ ಮಾಲುಗಳನ್ನು ಮಾತ್ರ ಮಾರಾಟ ಮಾಡಲಾಗುತ್ತದೆಯೇ ಎಂಬ ಪ್ರಶ್ನೆಗೆ ಈ ತನಕ ಖಚಿತ ಉತ್ತರ ಸಿಕ್ಕಿಲ್ಲ.

ಶನಿವಾರದಿಂದ ಗುರುವಾರದ ದಿನಗಳಲ್ಲಿ ಬೆಳಿಗ್ಗೆ 11ರಿಂದ ಸಂಜೆ 7.30ರ ತನಕ ಇಲ್ಲಿ ವ್ಯಾಪಾರ ವಹಿವಾಟು ಜೋರು. ಶುಕ್ರವಾರ ಒಂದು ರೀತಿ ರಜೆ. ಎಲ್ಲೂ ಸಿಗದಂತಹ ಹಳೆಯ ವಸ್ತುಗಳು, ಬಿಡಿಭಾಗಗಳು, ಕಳ್ಳತನ ಮಾಡಿದ ಸಾಮಗ್ರಿಗಳನ್ನೂ ಬಹಿರಂಗವಾಗಿ ರಸ್ತೆ ಬದಿ ಮಾರಲಾಗುತ್ತದೆ. ಮುಂಬೈಗೆ ಬಂದ ಪ್ರವಾಸಿಗರಿಗೂ ‘ಚೋರ್ ಬಜಾರ್’ ಎಂದರೆ ಕುತೂಹಲ. ಅದರಲ್ಲೂ ವಿದೇಶಿ ಪ್ರವಾಸಿಗರ ತಂಡವನ್ನು ಇಲ್ಲಿಗೆ ಕರೆತರುವ ದೃಶ್ಯ ಪ್ರತಿನಿತ್ಯ ಕಂಡುಬರುತ್ತದೆ.

‘ಚೋರ್ ಬಜಾರ್’ನಲ್ಲಿ ಎಲ್ಲೂ ಸಿಗದ ವಸ್ತುಗಳು